ಶ್ರೀ ಎ. ಶಂಕರ ಆಳ್ವ.—ತ್ರಿ ಟೈರ್ ಸಿಸ್ಟಂ ಮಾಡಿದರೆ ಬಹಳ ಉತ್ತಮವೆಂದು ನನಗೆ ಕಾಣುತ್ತದೆ. ಅದಕ್ಕಾಗಿ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಗೊಬ್ಬರವನ್ನು ಮಾರ್ಕೆಟ್ ಮಾಡುತ್ತಿದ್ದಾರೆ. ಎಂಬುದಾಗಿ ಹೇಳಿದರು. ಮಾರ್ಕೆಟ್ ದರ ಒಂದೇ ಜಾಗದಲ್ಲಿ ಬೇರೆಬೇರೆ ರೀತಿಯಲ್ಲಿ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದನ್ನು ಸರಿಪಡಿಸುವುದಕ್ಕೆ ಏನು ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಬೇರೆಬೇರೆ ದರವನ್ನು ಈಗಾಗಲೇ ನಿಗದಿ ಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ದರ ಎಲ್ಲಾ ಒಂದೇ ಗೊತ್ತುಮಾಡಿದ್ದರೂ ಸಹ ಕಾರ್ಪೊರೇಷನ್ನಿನವರು ಫೆಡರೇಷನ್ ಅವರಿಗಿಂತಲೂ ಕಡಿಮೆ ದರದಲ್ಲಿ ಮಾರಿ ಪೈಪೋಟಿ ಬಡೆಸುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ.—ಇಲ್ಲ.

ಶ್ರೀ ಪಿ. ಎಂ. ಬಂಗಿ.—ಮೊದಲು ಇದರ ಲಾಭ ಕಡಿಮೆಯಾಗಿರುವುದಕ್ಕೆ ಕಾರಣವೇನು ?

ಶ್ರೀ ಎ. ಶಂಕರ ಆಳ್ವ.—ಮೊದಲು ಇಷ್ಟು ಡಿಮ್ಯಾಂಡ್ ಇರಲಿಲ್ಲ. ಈಗ ಎಲ್ಲವನ್ನೂ ಹಂಚಿಕೆ ಮಾಡಿಕೊಡುತ್ತಿದ್ದಾರೆ. ಆದರೆ 1970-71ನೇ ಮತ್ತು 1971-72ನೇ ಸಾಲಿನಲ್ಲಿ ಗೋಡೌನಿಗೆ ಭೇಟಿ ಕೊಟ್ಟಾಗ ಅಲ್ಲಿನ ವರದಿ ಪ್ರಕಾರ ಇದಕ್ಕೆ ಅಷ್ಟು ಡಿಮ್ಯಾಂಡ್ ಇಲ್ಲದೇ ಇದ್ದುದರಿಂದ ಗೋಡೌನ್ ಬಾಡಿಗೆ ಕೊಡಬೇಕಾದ್ದರಿಂದ ಲಾಭ ಕಡಿಮೆಯಾಗಿದೆ.

ಶ್ರೀ ಬಿ. ಜಿ. ಬಣಕಾರ್.—ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಲ್ಲಿ ಹೆಚ್ಚಿಗೆ ಸ್ಟಾಫ್ ಇರುವುದರಿಂದ, ಸಹಕಾರಿ ಸಂಘಗಳ ಮೂಲಕ ಇದನ್ನು ಹಂಚುವ ಕೆಲಸವನ್ನು ಬಿಟ್ಟು ಅವರೇ ಇದರ ಪೂರಾ ಕೆಲಸ ಮಾಡುವುದಕ್ಕೆ ತಕ್ಕ ಡೈರೆಕ್ಷನ್ ಕೊಡುತ್ತೀರಾ ?

ತ್ರೀ ಎ. ಶಂಕರ ಆಳ್ವ.—ಇದು ಉತ್ತಮವಾದಂಥ ನಲಹೆ. ಇದನ್ನು ಪರ್ಯಾಲೋಚನೆ ಮಾಡುತ್ತೇವೆ.

Repairs to Bangalore-Mysore Road

232. Sri S. KARIAPPA (Kanakapura).—

Will the Minister for Public Works and Electricity be pleased to state :—

(*a*) whether it has come to the notice of the Government that the Bangalore—Mysore road between Torekadanahalli and Harohalli has been badly damaged on account of the movement of E.C.C. heavy vehicles ;

(*b*) the step taken by Government to effect repairs to this road?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The road is repaired to the extent funds are available.

ಶ್ರೀ ಎಸ್. ಕರಿಯಪ್ಪ.—ನನ್ನ ಪ್ರಶ್ನೆಗೆ ಉಪಪ್ರಶ್ನೆಗಳು ಏನೂ ಇಲ್ಲ.